ದಿನಾಂಕಃ 23.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀಮತಿ.ಎನ್.ಎಂ.ಸಿ.ವಕೀಲರಿಂದ:</u>**

8. ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶ ಬಂದ ನಂತರ ನಾನು ಪ್ರೆಸ್ ಮೀಟ್ ಕರೆದು 'ಸಾರ್ವಜನಿಕ ರಸ್ತೆಗೆ ಮಹಿಳೆ ಅಡ್ಡಲಾಗಿ ಬೇಲಿ ಹಾಕಿದ್ದಾಳೆ' ಎಂದು ಹೇಳಿಕೆ ನೀಡದ್ದೇನೆ ಎಂದರೆ ಸರಿ. 1993-94 ರಲ್ಲಿ ನಾನು, ಮಂಡೆಪಂಡ ಉತ್ತಪ್ಪ, ಕುಲುವಂಡ ಜುಗುಲ್ ದೇವಯ್ಯ ರವರು ಸೇರಿ ಪಂಚಾಯಿತಿಗೆ ಮನವಿ ಕೊಟ್ಟು ರಸ್ತೆ ಮಾಡುವಂತೆ ಕೇಳಿದ್ದೆವು. ಉತ್ತಪ್ಪ ರವರು ಕುಲುವಂಡ ಮುತ್ತಣ್ಣ ರವರಿಂದ ಅದೇ ಸಮಯಕ್ಕೆ ಜಾಗ ಖರೀದಿಸಿದ್ದಿರಬಹುದು. ಉತ್ತಪ್ಪರವರಿಗೆ ಮೂರು ಜಮೀನುಗಳು ಇದ್ದು, ಎರಡು ಜಮೀನುಗಳ ಸರ್ವೆ ನಂಬರ್ 14 ಮತ್ತು 15 ಆಗಿದ್ದು, ಮತ್ತೊಂದು ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಉತ್ತಪ್ಪರವರು ಖರೀದಿಸಿರುವ ಜಮೀನಿನ ಒಟ್ಟು ವಿಸ್ತೀರ್ಣ 20 ಎಕರೆಗೂ ಹೆಚ್ಚು ಇರಬಹುದು. 1 ಕಿ.ಮೀ ಉದ್ದದ ರಸ್ತೆಯನ್ನು 18 ವರ್ಷಗಳ ಕಾಲ ನಿರ್ಮಾಣ ಮಾಡುವ ಅಗತ್ಯ ಇಲ್ಲ ಎಂದರೆ ಸರಿ. ವಿವಾದಿತ ರಸ್ತೆಯ ಪಕ್ಕದಲ್ಲಿ ಮತ್ತೊಂದು ರಸ್ತೆ ಇದೆ ಎಂದರೆ ಸರಿ. ಆ ರಸ್ತೆಯ ವಿಚಾರವನ್ನು ಗ್ರಾಮ ನಕಾಶೆಯಲ್ಲಿ ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ರಸ್ತೆಗೆ ಕಲ್ಲು ಹಾಕಿದ್ದು, ಇನ್ನು ಡಾಂಬರಿಕರಣ ಆಗಿಲ್ಲ.

9. ನನ್ನ ಮನೆ ಇರುವ 40 ಸೆಂಟ್ ಜಾಗ ಕಂದಾಯ ಜಾಗ ಎಂದರೆ ಸರಿ. ಆ ಜಾಗ ಕುಲುವಂಡ ಕುಟುಂಬದ ಜಮ್ಮಾ ಆಸ್ತಿ ಎಂದರೆ ಸರಿ. ಆ ರಸ್ತೆಯನ್ನು ಮಂಡೆಪಂಡ ಉತ್ತಪ್ಪರವರು ನನ್ನ ತಂದೆಗೆ ದಾನ ಕೊಟ್ಟಿದ್ದಾರೆ ಎಂದರೆ ಸರಿ. ಈಗಲೂ ಸಹ ಕುಲುವಂಡ ಕುಟುಂಬಸ್ಥರು ಇದ್ದಾರೆ ಎಂದರೆ ಸರಿ. ಕುಲುವಂಡ ಕುಟುಂಬಸ್ಥರು ನನ್ನ ತಂದೆಯ ಹೆಸರಿಗಿರುವ ದಾನ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಸದರಿ 40 ಸೆಂಟ್ ಜಾಗಕ್ಕೆ ಉತ್ತಪ್ಪ ರವರ ಹೆಸರಿಗೆ ಕ್ರಯ ಪತ್ರ ಇರಬಹುದು. ಸರ್ವೆ ನಂ.17/1 ರ 45 ಸೆಂಟ್ ಜಾಗ ಅಚಲ್ ಅಚ್ಚಯ್ಯ ರವರ ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂ.17/3 ರ 44 ಸೆಂಟ್ ಜಾಗ ಕುಲುವಂಡ ಕುಟುಂಬಸ್ಥರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.17/1 ರ 40 ಸೆಂಟ್ ಜಾಗ ಸುಶಿ ರವರ ಹೆಸರಿಗೆ ಇದೆ ಎಂದರೆ ಸರಿಯಲ್ಲ. ನನ್ನ ಜಾಗದ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ಪಡೆದುಕೊಳ್ಳುವಾಗ ನಮ್ಮ ವಂಶ ವೃಕ್ಷದ ಪಟ್ಟಿ ಮತ್ತು ಕುಟುಂಬ ಸದಸ್ಯರ ಪಟ್ಟಿಯನ್ನು ಹಾಜರುಪಡಿಸಲಾಗಿದೆಯಾ ಎಂದು ನನಗೆ ನೆನಪಿಲ್ಲ. ನನಗೆ ಒಬ್ಬ ಸಹೋದರಿ ಇದ್ದಾರೆ ಎಂದರೆ ಸರಿ.

10. ನಾನು ದೇವಸ್ಥಾನ ಕಟ್ಟಲು ಪಂಚಾಯಿತಿಯಿಂದ ಅನುಮತಿ ಪಡೆದಿಲ್ಲ. ಸಾಕ್ಷಿಯು ಮುಂದುವರಿದು ಮನೆಯಲ್ಲಿಯೇ ದೇವಸ್ಥಾನ ಕಟ್ಟುವುದರಿಂದ ಅನುಮತಿ ಬೇಡ ಎಂದು ನುಡಿದಿದ್ದಾರೆ. ನಾನು ನನ್ನ ಜಾಗಕ್ಕೆ ಸಂಬಂಧ ಪಟ್ಟಂತೆ ಗ್ರಾಮ ಪಂಚಾಯಿತಿ ಮತ್ತು ಕಂದಾಯ ಇಲಾಖೆಯಲ್ಲಿ ಕಂದಾಯ ಪಾವತಿಸುತ್ತಿದ್ದೇನೆ. ಜಿಲ್ಲಾ ನೊಂದಣಾಧೀಕಾರಿಗಳ ವಿಚಾರಣೆಯಲ್ಲಿ ಉತ್ತಪ್ಪ ರವರ ಮಗ ಗಿರೀಶ್ ರವರು ಹಾಜರಾಗಿ ಉತ್ತಪ್ಪರವರು ನನ್ನ ತಂದೆಗೆ ದಾನ ಪತ್ರ ಬರೆದು

ಕೊಟ್ಟಿರುವ ವಿಚಾರ ಗೊತ್ತಿಲ್ಲ ಎಂದು ನುಡಿದಿರುತ್ತಾರೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆ ಸದರಿ ವಿಚಾರವಾಗಿ ಜಿಲ್ಲಾ ನೊಂದಾಣಾಧೀಕಾರಿಗಳು ಮಾಡಿರುವ ಆದೇಶ ಎಂದರೆ ಇರಬಹುದು. ಸದರಿ ದಾಖಲೆಯನ್ನು ನಿಪಿ-23 ಎಂದು ಗುರುತಿಸಲಾಯಿತು. ವಿವಾದಿತ ರಸ್ತೆ ವಾದಿಯ ಖಾಸಗಿ ರಸ್ತೆ ಆಗಿದ್ದು, ಅದರ ಮೇಲೆ ಸಾರ್ವಜನಿಕರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಸಹ ನಾನು ಅದನ್ನು ಉಲ್ಲಂಘನೆ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪಹಣಿ ಮತ್ತು ಸುಳ್ಳು ದಾನ ಪತ್ರವನ್ನು ಸೃಷ್ಟಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಖಾಸಗಿ ರಸ್ತೆಯನ್ನು ನಾನು ಒತ್ತಾಯ ಪೂರ್ವಕವಾಗಿ ಬಳಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಅಪರ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ವಿರಾಜಪೇಟೆ.